# ಕಥೋಪದೇಶ

# ಸ್ವರ್ಗೀಯ ಗಾನ

ತಾನ್‌ಸೇನ್ ಸುಪ್ರಸಿದ್ಧ ಸಂಗೀತಗಾರ. ಅವನ ಸಂಗೀತವನ್ನು ಕೇಳಿ ಮೆಚ್ಚದವರಿಲ್ಲ. ಅವನು ಸಾಮ್ರಾಟ್ ಅಕ್ಬರನ ಆಸ್ಥಾನ ವಿದ್ವಾಂಸನಾಗಿದ್ದನು. ಅಕ್ಬರ್ ಅವನ ಸಂಗೀತ ಕೇಳುತ್ತ ಮೈಮರೆಯುತ್ತಿದ್ದ.

ತಾನ್‌ಸೇನ್‌ನ ಗುರು ಹರಿದಾಸ್. ಒಮ್ಮೆ ರಾಜನಿಗೆ ಹರಿದಾಸರು ಹಾಡುವುದನ್ನು ಕೇಳಬೇಕೆಂಬ ಆಸೆ ಆಯಿತು. ಅವನು ತಾನ್‌ಸೇನನಿಗೆ ಹೇಳಿದ : "ನಿಮ್ಮ ಗುರುವಿನ ಖ್ಯಾತಿಯನ್ನು ನಾನು ಕೇಳಿದ್ದೇನೆ. ಆದರೆ ನಾನು ಅವರ ಸಂಗೀತವನ್ನು ಇದುವರೆಗೂ ಕೇಳಿಲ್ಲ."

ತಾನ್‌ಸೇನ್ : "ಅವರು ಊರಿನಲ್ಲಿ ಜನರ ಎದುರು ಹಾಡುವುದಿಲ್ಲ. ಕಾಡಿನೊಳಗೇ ಹಾಡುತ್ತಿರುತ್ತಾರೆ."

ಅಕ್ಬರ್ : "ನಾನು ಕಾಡಿಗೇ ಹೋಗಿ ಕೇಳುತ್ತೇನೆ. ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗಿ."

ತಾನ್‌ಸೇನ್ : "ಜನರನ್ನು ನೋಡಿದರೆ ಅವರು ಹಾಡುವುದೇ ಇಲ್ಲ."

ಕಲೆ: ಪುರುಷೋತ್ತಮ ಕಾರಂತ



ಅಕ್ಬರ್ : "ಹಾಗಾದರೆ ಮರೆಯಲ್ಲಿ ನಿಂತು ಅವರಿಗೆ ತಿಳಿಯದಂತೆ ಅವರು ಹಾಡುವುದನ್ನು ಕೇಳೋಣ."

ಇಬ್ಬರೂ ಕಾಡಿಗೆ ಹೋದರು. ಮರೆಯಲ್ಲಿ ನಿಂತು ಹರಿದಾಸರು ಹಾಡುವುದನ್ನು ಕೇಳಿದರು. ರಾಜನಿಗೆ ಅವರ ಹಾಡನ್ನು ಕೇಳಿ ತುಂಬ ಆನಂದವಾಯಿತು. ಅಂತಹ ಸ್ವರ್ಗೀಯ ಗಾನವನ್ನು ಅವನು ಎಂದೂ ಕೇಳಿರಲೇ ಇಲ್ಲ.

ಅಕ್ಬರ್ ತಾನ್‌ಸೇನ್‌ನನ್ನು ಉದ್ದೇಶಿಸಿ ಹೇಳಿದ: 'ನಿಮ್ಮ ಸಂಗೀತ ನನ್ನ ಎದೆಯನ್ನು ತುಂಬುತ್ತಿತ್ತು. ಆದರೆ ನಿಮ್ಮ ಗುರುವಿನ ಸಂಗೀತದ ಮಾಧುರ್ಯಕ್ಕೆ ಸಾಟಿಯೇ ಇಲ್ಲ."

ಅದು ನಿಜ. ನಾನಾದರೋ ದೊರೆಯ ಎದುರು ಹಾಡುತ್ತೇನೆ. ನನ್ನ ಗುರು ಲೋಕದೊಡೆಯನೆದುರು ಹಾಡುತ್ತಾರೆ." ಎಂದನು ತಾನ್‌ಸೇನ್. *